ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಮಾನ್ಯ ಅಧ್ಯಕ್ಷರೇ ಹಗರಿ ಬೊಮ್ಮನ ಹಳ್ಳಿಯಲ್ಲಿರುವ ಶಾಲೆಯನ್ನು ಇತ್ತೀಚೆಗೆ ಹೊನ್ನೇನ ಹಳ್ಳಿಗೆ ವರ್ಗಾವಣೆ ಮಾಡಿ ಅಲ್ಲಿ ಪ್ರಾಥಮಿಕ ಶಾಲೆ ಕಟ್ಟಡವನ್ನು ತೆಗೆದುಕೊಂಡು ಪೂರ್ಣ ಮಾಡಿದ್ದೇವೆ. ಹೊನ್ನೇನಹಳ್ಳಿಯ ಶಾಲಾಕಟ್ಟಡವನ್ನು ಸಹ ಕೈಕೊಂಡು ಅರ್ಧ ಕೆಲಸ ಪ್ರಾರಂಭ ಮಾಡಿ ಅರ್ಧ ಕೆಲಸ ಪೂರ್ಣಗೊಂಡಿಲ್ಲ. ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಈ ಕೆಲಸವನ್ನು ಇನ್ನು ಎರಡು ತಿಂಗಳಲ್ಲಿ ಮುಗಿಸಿಕೊಡುತ್ತೇನೆ.

ಶ್ರೀ ಕರಿಬಸವನಗೌಡ.—ಇದುವರೆವಿಗೂ ಪೂರ್ಣಗೊಂಡ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು, ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ. ಮತ್ತು ಹಗರಿಬೊಮ್ಮನಹಳ್ಳಿ ಮತ್ತು ಹೊನ್ನೇನಹಳ್ಳಿಯಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ಕೆಲಸ ಪೂರ್ಣಗೊಂಡಿಲ್ಲ. ಹಾಗೆಯೇ ಇವೆ. ಇವುಗಳನ್ನು ಪೂರ್ಣ ಮಾಡಲು ನಾನು ಪೀಪಲ್ಸ್ ಕಾಂಟ್ರಿಬ್ಯೂಷನ್ ಕೊಡಿಸಿಕೊಟ್ಟಿದ್ದೇನೆ. ಆದ್ದರಿಂದ ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳಿಗೆ ಈ ವಿಷಯದ ಬಗ್ಗೆ ಸರಿಯಾದ ಮಾಹಿತಿ ಒದಗಿಸಿಕೊಟ್ಟಿಲ್ಲವಾದ್ದರಿಂದ ಈ ಪ್ರಶ್ನೆಯನ್ನು ತಡೆ ಹಿಡಿಯಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕಳುಹಿಸಿಕೊಟ್ಟಿರುತ್ತಾರೋ ಅದಕ್ಕೆ ಮಾತ್ರ ಉತ್ತರ ದೊರೆಯುತ್ತದೆ.

ಶ್ರೀ ಕರಿಬಸವನಗೌಡ.—ಹೊನ್ನೇನಹಳ್ಳಿಯಲ್ಲಿ ಪೂರ್ಣಗೊಳ್ಳದೆ ಇರುವಂತಹ ಪ್ರಾಥಮಿಕ ಶಾಲೆಯ ಕಟ್ಟಡವನ್ನು ಯಾವಾಗ ಪೂರ್ಣ ಮಾಡಿಕೊಡುತ್ತಾರೆ ಎನ್ನುವ ಒಂದು ಉಚಿತವಾದ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ?

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಕಂಟ್ರಾಕ್ಟ್ ದಾರರು ಹಣವನ್ನು ತೆಗೆದುಕೊಂಡು ಕೆಲಸವನ್ನು ಮಾಡಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಹಾಗೆ BDO ಗೆ ನಾವು ಪತ್ರವನ್ನು ಬರೆದಿದ್ದೇವೆ. ಇನ್ನು ಎರಡು ತಿಂಗಳಲ್ಲಿ ಈ ಕೆಲಸವನ್ನು ಪೂರ್ಣ ಮಾಡಿ ಕೊಡುತ್ತೇವೆ.

ಶ್ರೀ ಕರಿಬಸವನಗೌಡ.—ನಾನು ಪೀಪಲ್ಸ್ ಕಾಂಟ್ರಿಬ್ಯೂಷನ್ ಎರಡು ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿಕೊಟ್ಟಿದ್ದೇನೆ. ಆ ಎಲ್ಲಾ ಹಣವನ್ನು ಸಹ ಬಳಸಿಕೊಂಡಿದ್ದಾರೆ. ಆದರೆ ಶಾಲಾ ಕಟ್ಟಡ ಮಾತ್ರ ಆಗಿಲ್ಲ. ಮಂಜೂರಾತಿ ಕೂಡ ಆಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳ ಹತ್ತಿರ ಸರಿಯಾದ ಮಾಹಿತಿ ಇಲ್ಲ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕರಿಬಸವನಗೌಡ.—ನಾನು ಈಗ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

SRI H. GANGADHARAN—Sir, one by name Bellary Siddamma the first woman MLA, from Davangere Constituency died on Tuesday. It has appeared in today's Express newspaper. ಶ್ರೀಮತಿ ಬಳ್ಳಾರಿ ಸಿದ್ದಮ್ಮ ನವರ ನಿಧನದ ಬಗ್ಗೆ ಸಂತಾಪ ಸೂಚಕವಾಗಿ ಮಾಡಲಿಲ್ಲ.

ಅಧ್ಯಕ್ಷರು.—ಆ ಮೇಲೆ ನೋಡೋಣ.

Minor Irrigation Works in Kadur Taluk

135 SRI M. MALLAPPA (Birur).—Will the Minister for Transport and Minor Irrigation be pleased to st te.—

(a) whether it has come to the notice of the Government that the proposed Minior Irrigation works such as Yeradakere Lift Irrigation and Bannur Lift Irrigation and Chedanahalli Lift Irrigation, Sakrepatna Hobli in Kadur Taluk though included in the Budget yet to get clearance from the Government;

(b) whether Government would take action without any delay to commence the work so as to provide water for irrigation?

SRI M. M. J. SADYOJATHA (Minister for Transport and Minor irrigation). —

(a) These works are not included in the Budget.

(b) Does not arise in view of reply to (a).

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಆಯವ್ಯಯ ಪತ್ರದಲ್ಲಿ ಈ ಕಾಮಗಾರಿಯನ್ನು ಸೇರಿಸಿಲ್ಲ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ವರಲ್ಡ್ ಪ್ರಾಜೆಕ್ಟ್‌ನಲ್ಲಿ ಎರಡು ವರ್ಷದಲ್ಲಿಯೇ ತಯಾರಾಗಿದ್ದು ಈ ಬಗ್ಗೆ ಅಂದಾಜು ಕೂಡ ತಯಾರಾಗಿದೆ. ಎಷ್ಟು ಅಂದಾಜು ತಯಾರಾಗಿದೆ?

ಶ್ರೀ ಎಂ. ವೆಂಕಟಪ್ಪ (ತೋಟಗಾರಿಕೆ ಮಂತ್ರಿಗಳು–ಸಾರಿಗೆ ಮತ್ತು ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ 3 ಪ್ರಾಜೆಕ್ಟ್‌ಗಳಲ್ಲಿ 1 ಪ್ರಾಜೆಕ್ಟ್‌ನ ಅಂದಾಜು ತಯಾರಾಗಿದ್ದು, ಇನ್ನು ಉಳಿದ ಎರಡು ಪ್ರಾಜೆಕ್ಟ್‌ಗಳ ಅಂದಾಜು ತಯಾರಾಗಿಲ್ಲ ಅಂದಾಜು ತಯಾರಾಗಿದ್ದುದರ ಮುಂಜೂರಾತಿಯೂ ಸಹ ಆಗಿದೆ. ಆದರೆ ವಾಣಿವಿಲಾಸ ಸಾಗರದಲ್ಲಿ ನೀರಿನ ಅಭಾವವಿರುವುದರಿಂದ ಮುಂದೆ ಬರತಕ್ಕಂತಹ ಪ್ರಾಜೆಕ್ಟ್‌ನ್ನು ತಡೆ ಹಿಡಿಯಬೇಕು ಎಂದು ಹೇಳಿ ನಿಲ್ಲಿಸಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಇದು ಡಿಪಿಎಪಿ ಏರಿಯಾ, ಆದ್ದರಿಂದ ಸಣ್ಣ ಪುಟ್ಟ ಕಾಮಗಾರಿಗಳನ್ನು ಮಾಡದೇ ಹೋದರೆ ಜನರಿಗೆ ತೊಂದರೆಯಾಗುತ್ತದೆ ಎಂದು ಶಿಫಾರಸು ಮಾಡಿತ್ತು. ಈಗ ಬ್ಯಾನನ್ನು ರಿಮೂವ್ ಮಾಡಿ ಕೆಲಸಗಳನ್ನು ಕಾರ್ಯಗತ ಮಾಡಲಿಕ್ಕೆ ಸಾಧ್ಯತೆ ಇದೆಯೇ?

ಶ್ರೀ ಕೆ. ಯಂಕಟಪ್ಪ.—ಈಗ ನಮ್ಮ ಸಣ್ಣ ನೀರಾವರಿ ಮುಖ್ಯ ಇಂಜಿನಿಯರು ಸರ್ಕಾರಕ್ಕೆ ಬರೆದಿದ್ದಾರೆ. ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಬೋರ್ಡಿಗೆ ಡಬ್ಲ್ಯು.ಆರ್ ಡಿ. ಚೀಫ್ ಇಂಜನಿಯರ್‌ಗೆ ಬರೆದಿದ್ದಾರೆ. ಬೋರ್ಡಿನವರು ಇನ್ನು ಐದಾರು ತಿಂಗಳೊಳಗೆ ತೀರ್ಮಾನ ತೆಗೆದುಕೊಂಡು ಸರ್ಕಾರಕ್ಕೆ ತಿಳಿಸುತ್ತಾರೆ, ಅದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಬೋರ್ಡ್‌ನವರು ಸರ್ಕಾರಕ್ಕೆ ಶಿಫಾರಸು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಆದಷ್ಟು ಬೇಗ ಬ್ಯಾನ್ ತೆಗೆದುಬಿಟ್ಟು ಕೆಲಸಗಳನ್ನು ಮಾಡದೇ ಹೋದರೆ ಆ ಭಾಗದ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರ ಅತಿ ಶೀಘ್ರದಲ್ಲಿ ಇದನ್ನು ಪರಿಶೀಲನೆ ಮಾಡಬೇಕು ಮತ್ತು ಕೆಲಸಗಳನ್ನು ಕಾರ್ಯಗತ ಮಾಡುತ್ತದೆಯೇ?

ಶ್ರೀ ಕೆ. ಯಂಕಟಪ್ಪ.—ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು, ತೀವ್ರವಾಗಿ ಕ್ರಮ ತೆಗೆದುಕೊಂಡೇ ಬೋರ್ಡಿಗೆ ಬರೆದಿದೆ. ಬೋರ್ಡಿನವರು ತೀರ್ಮಾನ ತಿಳಿಸಿದರೆ ಅತಿ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

Development of Karwar Port

246. SRI H. GANGADHARAN (Krishnaraj).—Will the Minister of State for Fisheries and Ports be pleased to state.—

(a) whether it is a fact that amount sanctioned for the development of Karwar Port is not utilised and works are not in progress;

(b) if so, the reasons for non-utilisation of funds;

(c) the action taken on those responsible in this affair?

SRI D. B. PAWAR (Minister of State for Fisheries and Ports.)—

(a) No